ಊ) ಪ್ರತಿ ವರ್ಷ ನಿಗದಿಪಡಿಸಲಾಗುವ ಗುರಿಯಲ್ಲಿ ಇದುವರೆಗೂ ಅಲೆಮಾರಿ ಜನಾಂಗದವರಿಗೆ ಪ್ರತ್ಯೇಕವಾದ ಮನೆಗಳ ಗುರಿಯನ್ನು ನಿಗದಿಪಡಿಸಿರುವುದಿಲ್ಲ. ಆದಕಾರಣ ಈ ವರ್ಗದ ಜನರಿಗೆ ಪ್ರತ್ಯೇಕವಾಗಿ ಮೀಸಲಾತಿಯನ್ನು ಜಾರಿಗೆ ತರುವ ಸಂಬಂಧ ಅಥವಾ ಪ್ರತ್ಯೇಕವಾಗಿ ಮನೆ/ನಿವೇಶನ ನೀಡುವ ಸಂಬಂಧ ಅಥವಾ ಪ್ರತ್ಯೇಕವಾಗಿ ಅಲೆಮಾರಿ ವರ್ಗದವರಿಗೆ ಯೋಜನೆಯನ್ನು ರೂಪಿಸುವ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು)111(230)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

1) ಮಜೂರು ಗ್ರಾಮ ಪಂಚಾಯತ್ ವ್ಯಾಪ್ತಿ ಹೇರೂರು ಗ್ರಾಮಕ್ಕೆ ಬರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ?

2) ಇದ್ದಲ್ಲಿ, ಹೇರೂರು ಗ್ರಾಮಸ್ಥರು 8 ಕಿಮೀ. ಬಳಸಿ ಗ್ರಾಮ ಪಂಚಾಯತ್ ಕಾರ್ಯಗಳಿಗೆ ಬರುವ ಬಗ್ಗೆ ಮಾಹಿತಿ ನೀಡಲಾಗಿದೆಯೇ?

3) ಈ ಮಾಹಿತಿ ಇದ್ದಲ್ಲಿ ರಸ್ತೆ ರಚನೆಗೆ ಈ ಸಾಲಿನಲ್ಲಿ ರೂ.30.00 ಲಕ್ಷಗಳನ್ನು ನೀಡಲು ಸರ್ಕಾರ ಆದೇಶಿಸುವುದೇ?

ಶ್ರೀ ಸಿ.ಎಂ.ಉದಾಸಿ

ಅ) ಉಡುಪಿ ತಾಲ್ಲೂಕು ಹೆರೂರು ಗ್ರಾಮವು ಮಜೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುತ್ತದೆ.

ಆ) ಹೆರೂರು ಗ್ರಾಮದಿಂದ ಮಜೂರು ಗ್ರಾಮಕ್ಕೆ ನೇರ ರಸ್ತೆ ಸಂಪರ್ಕವಿಲ್ಲದಿರುವುದರಿಂದ ಕಾಪು ಮುಖಾಂತರ 8ಕಿ.ಮೀ. ಬಳಸಿ ಮಜೂರು ಗ್ರಾಮ ಪಂಚಾಯತ್ ಕಾರ್ಯಾಲಯಕ್ಕೆ ಬರಬೇಕಾಗುತ್ತದೆ.

ಇ) ಹೆರೂರು ಗ್ರಾಮದಿಂದ ಮಜೂರುವರೆಗಿನ ನೇರ ರಸ್ತೆಯ ಉದ್ದವು 4.00ಕಿ.ಮೀ.ಇರುತ್ತದೆ.ಇದರಲ್ಲಿ ಹೆರೂರಿನಿಂದ 2.00ಕಿ.ಮೀ. ಉದ್ದಕ್ಕೆ ನಬಾರ್ಡ್ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲಾಗಿದ್ದು ಡಾಂಬರು ಮೇಲ್ಮೈ ಹೊಂದಿರುತ್ತದೆ.ಇನ್ನುಳಿದ 2.00ಕಿ.ಮೀ. ಉದ್ದದಲ್ಲಿ 0.50ಕಿ.ಮೀ. ಉದ್ದವು ಜಲ್ಲಿ ಮೇಲ್ಮೈ ಹಾಗೂ 1.50ಕಿ.ಮೀ. ಉದ್ದವು ಗ್ರಾವೆಲ್ ಮೇಲ್ಮೈ ಹೊಂದಿರುತ್ತದೆ. ಇದಲ್ಲದೇ ಸರಪಳಿ 2.50ಕಿ.ಮೀ ನಲ್ಲಿ 15ಮೀಟರ್ ಉದ್ದದ (7.5 ಮೀಟರ್‌ನ 2 ಸ್ಪ್ಯಾನ್‌ಗಳು) ಸೇತುವೆ ನಿರ್ಮಿಸಬೇಕಾಗಿದ್ದು, ಒಟ್ಟಾರೆ ಅಭಿವೃದ್ಧಿಗೆ ರೂ.50.00ಲಕ್ಷಗಳ ಅಗತ್ಯವಿದ್ದು, ಪ್ರಸ್ತುತ ಸಾಲಿನಲ್ಲಿ ಈ ಮೊತ್ತದ ಅನುದಾನವನ್ನು ಒದಗಿಸಲು ಸಾಧ್ಯವಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ(ಬಸವ ಕಲ್ಯಾಣ)112(339)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

1) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಎಷ್ಟು ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಆರಂಭಿಸಲು ಅನುಮತಿ ನೀಡಲಾಗಿದೆ(ಅನುಮತಿ ನೀಡಿರುವ ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

2) ಮೇಲ್ಕಂಡ ಶಾಲೆಗಳಿಗೆ ಅನುಮತಿ ನೀಡುವಾಗ ಹಿಂದುಳಿದ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ವಿಶೇಷವಾಗಿ ಬೀದರ್ ಜಿಲ್ಲೆಯನ್ನು ಕಡೆಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3) ಹಾಗಿದ್ದಲ್ಲಿ, ನಂಜುಂಡಪ್ಪ ಸಮಿತಿಯ ವರದಿ ಶಿಫಾರಸ್ಸಿನ ಅನ್ವಯ ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಎಷ್ಟು ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಅವಶ್ಯಕತೆ ಇರುತ್ತದೆ;